# ಸಮಗ್ರ ದಾಸ ಸಾಹಿತ್ಯ
# ಸಂಪುಟ – ೮

## ಶ್ರೀ ಪ್ರಸನ್ನ ವೆಂಕಟದಾಸರ ಕೀರ್ತನೆಗಳು

**ಪ್ರಸ್ತಾವನೆ, ಪುಟ ೨೬**

ತಿರುಪತಿಯಲ್ಲೇ ಕೆಲವು ಕಾಲ ಇದ್ದ ವೆಂಕಟದಾಸರಿಗೆ ವಿದ್ಯಾಭ್ಯಾಸ ಮಾಡಬೇಕೆನ್ನಿಸಿತು. ಯೋಗ್ಯ ಗುರುಗಳನ್ನು ಹುಡುಕುತ್ತ ಹೊರಟ ಇವರಿಗೆ ಅವರ ಪ್ರಾಂತ್ಯದಲ್ಲೇ ಪ್ರಸಿದ್ಧ ವಿದ್ವಾಂಸರಾಗಿದ್ದ ಮುದ್ಗಲ ಜನಾರ್ದನಾಚಾರ್ಯರು ಗುರುಗಳಾಗಿ ದೊರಕುತ್ತಾರೆ. ಐದಾರು ವರ್ಷಗಳ ಕಾಲ ಅವರ ಶಿಷ್ಯರಾಗಿದ್ದುಕೊಂಡು ದಾಸರು ಸಂಸ್ಕೃತವನ್ನು ಕಲಿಯುತ್ತಾರೆ. ಭಾರತ, ರಾಮಾಯಣ, ಭಾಗವತ, ದ್ವೈತ ಸಿದ್ಧಾಂತಗಳಲ್ಲಿ ಪಂಡಿತರಾಗಿ ಮರಳಿ ಬಾಗಲಕೋಟೆಗೆ ಬರುತ್ತಾರೆ. ಗುರುಗಳಾದ ಜನಾರ್ದನಾಚಾರ್ಯರ ಬಗ್ಗೆ ದಾಸರಿಗೆ ಅಪಾರವಾದ ಭಕ್ತಿ. ಗೌರವವಿದ್ದುದಕ್ಕೆ ಅವರನ್ನು ಕುರಿತ ಕೀರ್ತನೆಗಳೇ ಸಾಕ್ಷಿಯಾಗಿವೆ.

**ಪ್ರಸ್ತಾವನೆ, ಪುಟ ೪೬**

... ದಾಸರು ತಮ್ಮ ಶಿಕ್ಷಾ ಗುರುಗಳಾದ ಜನಾರ್ದನಾಚಾರ್ಯರನ್ನು ಕುರಿತು ರಚಿಸಿರುವ ಕೀರ್ತನೆಗಳು ಹಾಗೂ ಮಾಧ್ವ ಗುರುಪರಂಪರೆಯನ್ನು ಸ್ತುತಿಸಿರುವ ಕೀರ್ತನೆಗಳು. ... ತಮ್ಮ ಶಿಕ್ಷಾಗುರುಗಳಾದ ಜನಾರ್ದನಾಚಾರ್ಯರನ್ನು ಕುರಿತ ಕೀರ್ತನೆ ೧೬೫ನ್ನೇ ನೋಡಬಹುದು. ಗುರುಗಳು ವೈಕುಂಠವಾಸಿಗಳಾದ ಕಾಲಕ್ಕೆ ಇದನ್ನು ಬರೆದಂತೆ ತೋರುತ್ತದೆ.

ಈ ಕೀರ್ತನೆಯ ಆರಂಭವೇ ಹೃದಯಸ್ಪರ್ಶಿಯಾಗಿದೆ. "ಅಗಲಿ ಜೀವಿಸಬಹುದೆ ಕರುಣಿಯನಗಲಿ ಜೀವಿಸಬಹುದೆ" ಎಂದು ಆರಂಭವಾಗುವ ಈ ಕೀರ್ತನೆಯಲ್ಲಿ ಅವರ ವ್ಯಕ್ತಿತ್ವದ ಔನ್ನತ್ಯವನ್ನೂ ಗುರು ಶಿಷ್ಯರ ನಡುವೆ ಇದ್ದ ಆಪ್ತ ಸಂಬಂಧವನ್ನೂ ವರ್ಣಿಸಲಾಗಿದೆ. ಆಚಾರ್ಯರು ಆಗಮಜ್ಞರು, ಬುಧ ತಾರಾಗಣಕ್ಕೆ ಚಂದ್ರನಂತಿರುವವರು, ಭೂಮಿಯಲ್ಲಿ ಕಲ್ಪವೃಕ್ಷದಂತೆ ಜನಿಸಿ ದಾಸರನ್ನು ತಾಯಿತಂದೆಯಂತೆ ಸಲಹಿದ ಪರಮ ಧಾರ್ಮಿಕರು, ಇಂಥವರನ್ನು ಅಗಲಿ ಜೀವಿಸಬಹುದೇ ಎನ್ನುವಲ್ಲಿ ಅವರ ಬಗ್ಗೆ ದಾಸರಿಗಿರುವ ಅಪಾರವಾದ ಗೌರವಾದರಗಳನ್ನು ಕಾಣಬಹುದಾಗಿದೆ.

## ೨ (ಅ) ಗುರುಸ್ತುತಿ ೧೬೫ (ಪುಟ ೧೭೭-೧೭೮)

ಅಗಲಿ ಜೀವಿಸಬಹುದೇ ಕರುಣಿಯನಗಲಿ ಜೀವಿಸಬಹುದೆ ಪ.

ಆಗಮಜ್ಞನ ಬುಧ ಉಡುಗಣ ಚಂದ್ರನ
ವಿಗಡ ಜನಾರ್ದನವರ್ಯರನುಳಿದು ಅ.ಪ.

ಇಳೆಯೊಳು ಸುರತರುವಿಲ್ಲದ ಕಾರಣ
ನಳಿನನಾಭಾಜ್ಞದೊಳವತರಿಸಿ
ನೆಳಲೊಳಿರಿಸಿ ಬಹುಸಲಹಿ ಕರವ ಬಿಟ್ಟು
ಸಲೆ ಹರಿಪುರಕೆ ಪೋಗಿಹ ಮಾತಾಪಿತನ ೧

ಆರುಕರ್ಮಕ್ಕೆ ಎಳ್ಳನಿತು ಕುಂದಿಲ್ಲದೆ
ಮೀರದೆ ಹರಿಪದ ಸೇವೆಯನು
ಸೂರೆ ಮಾಡಿದ ತತ್ವಸಾರವ ಜನರೊಳು
ಮೀರಿದ ಸುಗುಣನ ಪರಮಪಾವನನ ೨

ಸೀತಾಪತಿಯ ಪಾದಯಾತ್ರೆಯ ಕಾಲಕೆ
ಇತರ ವಿಷಯ ಭ್ರಾಂತಿಯ ಜರಿದು
ಪ್ರತತಿಮತಿಗುಣಾನ್ಮುಕ್ತಿರ್ಮೇತೇ ವ್ರಜಂತಿಯೆಂದು
ಪಥವಿಡಿದ **ಪ್ರಸನ್ವೆಂಕಟೇಶ** ಪ್ರಿಯನ ೩

---

## ಕೀರ್ತನೆ ೧೮೬

ಸಲಹು ಸಲಹು ಗುರುರಾಯನೆ ನ
ನ್ನಾಲಸದೆ ಪಾವನ್ನಕಾಯನೆ ನಾನು
ಹಲವು ದಿವಸ ನಿನ್ನ ನಂಬಿರೆ ದ್ವಿಜ
ಕುಲಮಣಿ ಜನಾರ್ದನಾಚಾರ್ಯನೆ ಪ

ನಿನ್ನ ಶರಣು ಹೊಕ್ಕ ಭೃತ್ಯರು ತತ್ವ
ಪೂರ್ಣರಾದರು ಪೂತರಾದರು
ನನ್ನ ಮನ್ನಿಸಲಾಗದೆ ದಾತನೆ ವಿ

ದ್ಯೋನ್ನತ ವಿಶ್ವಕೆ ಪ್ರೀತನೆ ೧

ಆ ಬಾಲ್ಯದೊಳು ರಘುಪತಿ ಪಾದ
ಭಜನಾದರ ನಿನಗುಂಟು ಕೋವಿದ
ಈ ಮೇದಿನಿಯಲ್ಲಿ ಸುಧಾಸರಸದ
ಬಹು ಸ್ವಾದವ ಬಲ್ಲ ಇಷ್ಟಾರ್ಥದ ೨

ಅಜ್ಞಾನ ಕತ್ತಲೆ ಕವಿದಿದೆ ಆ
ಭಿಜ್ಞನ ಮಾಡಲಿ ಬಾರದೆ ನಿನ್ನ
ಪ್ರಜ್ಞತನದ ಪ್ರಸವ ನಿತ್ಯ
ಆಜ್ಞಾಧಾರಕಗೀಯೊ ಜ್ಞಾನವ ೩

ಭಕ್ತಿ ವೈರಾಗ್ಯ ಸುಜ್ಞಾನ ಸಂ
ಯುಕ್ತ ಮಂಗಳ ಗುಣಾಲಂಕೃತ
ಯುಕ್ತಿ ಸಾಲದು ಹರಿಸೇವೆಗೆ ಸ್ವಪ್ನ
ವ್ಯಕ್ತ ಬೋಧಿಸೆನಗೆ ೪

ತಂದೆ ತಾಯಿ ಆಪ್ತಮಿತ್ರ ನೀ ಗತಿ
ಹೊಂದಿಪ ದುರಿತಘಹರ್ತ ನೀ ಗೋ
ವಿಂದ **ಪ್ರಸನ್ವೆಂಕಟೇಶ**ನ ಹೃದಯ
ಮಂದಿರದೊಳು ಪೂಜಾಶೀಲನೆ ೫

---

## ಅನುಬಂಧ–೨

## ಪೂರ್ವ ಕಥೆಗಳು ಮತ್ತು ಲಘು ಟಿಪ್ಪಣಿಗಳು

ಪುಟ ೫೪೧–೫೪೨

**ಕೀರ್ತನೆ ೧೬೫**

**ಜನಾರ್ದನವರ್ಯ:** ಇವರು ಬಾಗಲಕೋಟೆ ಪ್ರಾಂತದ ಪ್ರಖ್ಯಾತ ಪಂಡಿತರು. ಪ್ರಸನ್ನ ವೆಂಕಟದಾಸರು ಶಿಕ್ಷಾ ಗುರುಗಳು. ದಾಸರು ಐದಾರು ವರ್ಷಗಳ ಕಾಲ ಇವರ ಬಳಿ ಇದ್ದು ವಿದ್ಯಾಭ್ಯಾಸ ಮಾಡಿದರು. ಇವರ ಬಗ್ಗೆ ದಾಸರಿಗಿದ್ದ ಅಮಿತವಾದ ಗೌರವಾದರಗಳು ಈ ಕೀರ್ತನೆಯಲ್ಲಿ ವ್ಯಕ್ತವಾಗಿವೆ. ಈ ಗುರುಗಳ ಬಗ್ಗೆ ಇನ್ನೂ ಕೆಲವು ಕೀರ್ತನೆಗಳನ್ನು ಬರೆದಿರುವರೆಂಬುದಕ್ಕೆ ದಾಖಲೆಗಳಿವೆಯಾದರೂ ನಮಗೆ ಎರಡು ಕೀರ್ತನೆಗಳು ಮಾತ್ರ ಸಿಕ್ಕಿವೆ.